
ಪ್ರಾರ್ಥನೆ

# ಜಗದ್ಗುರು ಶ್ರೀರಾಮಕೃಷ್ಣಸ್ತೋತ್ರ – 3



**ಶಶ್ವಲ್ಲೀಲಾ-ವಿಲಾಸೇನ ಯೇನ ಸರ್ವಮಿದಂ ತತಮ್ ।**
**ಲೀಲಾರೂಪಂ ಸದಾನಂದಂ ರಾಮಕೃಷ್ಣಂ ನಮಾಮ್ಯಹಮ್ ॥ ೯॥**

ಯಾರ ಲೀಲಾ ವಿಲಾಸದಿಂದ ಈ ಎಲ್ಲವೂ ತುಂಬಿಕೊಂಡಿದೆಯೋ ಅಂತಹ ಲೀಲಾರೂಪಿಗಳೂ ಸದಾ ಆನಂದಸ್ವರೂಪಿಗಳೂ ಆದ ಶ್ರೀರಾಮಕೃಷ್ಣರನ್ನು ನಮಿಸುತ್ತೇನೆ.

**ಸರ್ವಧರ್ಮಪ್ರಣೇತಾರಂ ಧರ್ಮಗ್ಲಾನಿವಿನಾಶಕಮ್ ।**
**ಸಾಧುಮಿತ್ರಂ ಶಿವಂ ಶಾಂತಂ ರಾಮಕೃಷ್ಣಂ ನಮಾಮ್ಯಹಮ್ ॥ ೧೦॥**

ಎಲ್ಲ ಧರ್ಮಗಳನ್ನೂ ಅವುಗಳ ನಿಜಸ್ವರೂಪದಲ್ಲಿ ನಿಲ್ಲಿಸಿದವರೂ, ಧರ್ಮಕ್ಕೆ ಒದಗುವ ಅಡಚಣೆಗಳನ್ನು ದೂರಮಾಡುವವರೂ, ಸಜ್ಜನರಿಗೆ ಮಿತ್ರರಾದವರೂ, ಮಂಗಳಮಯರೂ, ಶಾಂತರೂ ಆದ ಶ್ರೀರಾಮಕೃಷ್ಣರನ್ನು ನಮಿಸುತ್ತೇನೆ.

**ಅಜ್ಞಾನತಿಮಿರೇ ಯಸ್ತು ಜ್ಞಾನಲೋಕಪ್ರದೀಪಕಃ ।**
**ವಿಮಲಾನಂದದಾನಾಯ ಪ್ರಾದುರಾಸೀನ್ಮಹೀತಲೇ ॥**
**ನಮೋಽಸ್ತು ರಾಮಕೃಷ್ಣಾಯ ತಸ್ಮೈ ಶ್ರೀಗುರವೇ ನಮಃ ॥ ೧೧॥**

ಅಜ್ಞಾನದ ಕತ್ತಲೆ ತುಂಬಿಕೊಂಡಿರುವವರಿಗೆ ಜ್ಞಾನದ ಬೆಳಕನ್ನು ಹಚ್ಚಿದವರೂ, ಶುದ್ಧವಾದ ಆನಂದವನ್ನು ಅವರಿಗೆ ನೀಡುವವರೂ ಆದಂತಹ ಶ್ರೀರಾಮಕೃಷ್ಣರು ಭೂತಲದಲ್ಲಿ ಜನ್ಮತಳೆದರು. ಶ್ರೀಗುರುವಾದ ಶ್ರೀರಾಮಕೃಷ್ಣರಿಗೆ ನಮಸ್ಕಾರ.

**ಸಂಸಾರಾರ್ಣವಘೋರೇ ಯಃ ಕರ್ಣಧಾರಸ್ವರೂಪಕಃ**
**ನಮೋಽಸ್ತು ರಾಮಕೃಷ್ಣಾಯ ತಸ್ಮೈ ಶ್ರೀಗುರವೇ ನಮಃ॥ ೧೨ ॥**

ಭಯಂಕರವಾದ ಸಂಸಾರ ಎಂಬ ಸಮುದ್ರದ ದಡಮುಟ್ಟಿಸುವ ನಾವಿಕರಾಗಿರುವ ಶ್ರೀಗುರು ಶ್ರೀರಾಮಕೃಷ್ಣರಿಗೆ ನಮಸ್ಕಾರ.

— ಸ್ವಾಮಿ ಅಭೇದಾನಂದ

ಸೂಕ್ತಿಪ್ರಭ

## ಸ್ವಾತಂತ್ರ್ಯ ಸೂಕ್ತಿಗಳು

ಇತರರಿಗೆ ಸ್ವಾತಂತ್ರ್ಯವನ್ನು ನೀಡದವರಿಗೆ ಯಾವ ಸ್ವಾತಂತ್ರ್ಯವನ್ನೂ ಹೊಂದುವ ಅರ್ಹತೆಯಿಲ್ಲ.

— ಅಬ್ರಹಾಂ ಲಿಂಕನ್

ಹುಲ್ಲುಗಾವಲಿನಲ್ಲಿ ಹೂವು ಹೇಗೆ ಅರಳುವುದು? ಹೇಗೆಂದರೆ, ಅದು ತನ್ನ ಬೇರಿನ ತುದಿಯವರೆಗೂ ಸ್ವತಂತ್ರವಾಗಿರುವುದರಿಂದ. ಅಂಥ ಸ್ವಾತಂತ್ರ್ಯ ಇರುವುದರಿಂದ ಅದು ನಿರ್ಭೀತಿಯಿಂದಿರುವುದು.

— ವಿಲಿಯಂ ವರ್ಡ್ಸ್‌ವರ್ತ್

ನಮ್ಮ ಹೊರಗಿರುವ ಯಾರೂ ನಮ್ಮ ಅಂತರಂಗವನ್ನು ಆಳಲಾಗದು. ಇದನ್ನು ತಿಳಿದಾಗ ನಾವು ಸ್ವತಂತ್ರರಾಗುವೆವು.

— ಬುದ್ಧ

ಸ್ವಾತಂತ್ರ್ಯವಿಲ್ಲದಲ್ಲಿ ನೇಗಿಲು, ಸಮುದ್ರಯಾನ, ಜಮೀನು ಅಥವಾ ಜೀವನ ಇವುಗಳಿದ್ದೇನು ಪ್ರಯೋಜನ?

— ರಾಲ್ಫ್ ವಾಲ್ಡೋ ಎಮರ್ಸನ್

ಸ್ವಾತಂತ್ರ್ಯವೆಂದರೆ ನಾವು ಬಯಸಿದಂತೆ ಬಾಳುವ ಹಕ್ಕು ನಮಗಿರುವುದಲ್ಲದೆ ಬೇರೇನು?

— ಎಪಿಕ್ಟಟಸ್

ಮಾನವನು ತಾನು ಸ್ವತಂತ್ರನಾಗಬೇಕೆಂದು ಇಚ್ಛಿಸಿದ ಕ್ಷಣದಲ್ಲೇ ಮುಕ್ತನು.

— ವಾಲ್ಟೇರ್

ಉತ್ತಮ ವ್ಯಕ್ತಿಗಳಲ್ಲದೆ ಬೇರೆ ಯಾರೂ ಸ್ವಾತಂತ್ರ್ಯವನ್ನು ಸಂಪೂರ್ಣ ಹೃದಯದಿಂದ ಪ್ರೀತಿಸಲಾರರು. ಉಳಿದವರು ಸ್ವಾತಂತ್ರ್ಯವನ್ನಲ್ಲ, ಪರವಾನಗಿಯನ್ನು ಪ್ರೀತಿಸುತ್ತಾರೆ.

— ಜಾನ್ ಮಿಲ್ಟನ್

ಮಾನವನಿಗೆ ಆಗಲೇ ಸ್ವಾತಂತ್ರ್ಯವಿದೆ. ಆದರೆ ಅವನು ಅದನ್ನು ಕಂಡುಹಿಡಿಯಬೇಕಾಗಿದೆ. ಅವನಿಗೆ ಅದು ಇದೆ, ಆದರೆ ಅವನು ಪ್ರತಿಕ್ಷಣವೂ ಮರೆಯುತ್ತಿರುವನು.. ಒಂದು ಕಣದಿಂದ ನಕ್ಷತ್ರದವರೆಗೆ, ಎಲ್ಲರೂ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವರು.

— ಸ್ವಾಮಿ ವಿವೇಕಾನಂದ